ಅಲ್ಲದಿದ್ದರೂ ಒಂದು ಕೌಟುಂಬಿಕ ವ್ಯವಸ್ಥೆಯೇ ಹೆಣ್ಣುಮಕ್ಕಳನ್ನು ಈ ವಿನ್ಯಾಸಕ್ಕೆ ತಂದುಬಿಡುವುದರಲ್ಲಿ ಅನೇಕ ಸಲ ಯಶಸ್ವಿಯಾಗುತ್ತದೆ ಅಂತ ಅನಿಸತ್ತೆ. ಆದರೆ ಇದನ್ನು ನಾನು ಹಿನ್ನಡೆ ಅಂತ ಕರೆಯಲ್ಲ. ಏಕೆ ಅಂತಂದ್ರೆ, ಇಂಥ ಹಲವು ಹಿನ್ನಡೆಗಳನ್ನು ದಾಟಿಯೇ ನಾವು ಯಾವತ್ತೋ ಒಂದು ಸಲ ಚಿಮ್ಮಬೇಕು ಮುಂದಕ್ಕೆ ಅಂತ ಅನ್ಸುತ್ತೆ ನನಗೆ. ಈ ರೀತಿಯ ಯುಟರ್ನ್ ಕೂಡಾ ಶಾಶ್ವತ ಅಂತ ನಾನು ತಿಳ್ಕೊಂಡಿಲ್ಲ. 'ತಿರುಗಿ ಹೋದಳು' ಕತೆಯನ್ನು ಬರೆದ ವೀಣಾ ಶಾಂತೇಶ್ವರ, 'ಭಿನ್ನ' ತರದ ಮರಾಠಿ ಕಾದಂಬರಿಯನ್ನು ಅನುವಾದ ಮಾಡೋದು ಇದೆಯಲ್ಲ ಅದು ಆ ಯುಟರ್ನ್‌ನಿಂದ ಮತ್ತೆ ಹೊರಳುವ ಮುನ್ಸೂಚನೆಯಾಗಿ ಕೂಡ ನನಗೆ ಕಾಣಿಸತ್ತೆ. ಏಕೆ ಅಂತಂದ್ರೆ, ಅದು ಹೆಣ್ಣಿನ ವಾಸ್ತವವನ್ನು ಇನ್ನೊಂದು ರೀತಿಯಲ್ಲಿ ಎದುರಿಸುವ ಪ್ರಯತ್ನವಾಗಿದೆ. ಯಾವುದು ತನ್ನ ಬರವಣಿಗೆಯಲ್ಲಿ ಆಗ್ತಾ ಇಲ್ವೋ ಅದನ್ನು ಅನುವಾದದ ಮೂಲಕವಾಗಿ ಮಾಡ್ತಾ ಇರುವ ಒಂದು ಕ್ರಮವಾಗೇ ನನಗೆ ಕಾಣಿಸುತ್ತೆ.

◆ **ಕನ್ನಡದಲ್ಲಿ ಯಾವ ಲೇಖಕಿಯ ಹೊಸ ಹೆಣ್ಣಿನ ಚಹರೆ ನಿಮಗೆ ಆಪ್ತವಾದದ್ದು? ಅವಳೊಂದಿಗೆ ನಿಮ್ಮನ್ನು ನೀವು ಗುರುತಿಸಿಕೊಳ್ಳಲಿಕ್ಕೆ ಬಯಸುತ್ತೀರಾ?**

ಇದು ನಂಗೆ ತುಂಬಾ ಕಷ್ಟ. ಯಾಕೆ ಅಂತಂದ್ರೆ ಎಲ್ಲಾ ಹೊಸ ಹೆಣ್ಣುಗಳಿಗೂ ಅವರದೇ ಆದ ಒಂದು ಐತಿಹಾಸಿಕ ಮಹತ್ವ ಇದೆ. ವೀಣಾ ಶಾಂತೇಶ್ವರ ಅವರ ಹೊಸ ಹೆಣ್ಣು, ವೈದೇಹಿಯವರ ಹೊಸ ಹೆಣ್ಣು, ಅವರ ಎಲ್ಲಾ ದೌರ್ಬಲ್ಯಗಳೂ, ಅಥವಾ ನಮಗೆ ಎದುರಾಗುವ ಅವರ ಕೆಲವು ಮಿತಿಗಳ ಜೊತೆಯಲ್ಲೂ ನನಗೆ ಅವರು ಎಲ್ಲರೂ ಪ್ರಿಯರಾಗ್ತಾರೆ. ಪ್ರತಿಭಾ ನಂದಕುಮಾರ್, ಲಲಿತಾ ಸಿದ್ಧಬಸವಯ್ಯ ಅವರ ಹೊಸ ಹೆಣ್ಣು ಕೂಡಾ ನನಗೆ ಇಷ್ಟ. ಏಕೆ ಅಂದ್ರೆ ಭಿನ್ನ ಭಿನ್ನ ಹಿನ್ನೆಲೆಯಿಂದ ಬಂದ ಈ ಎಲ್ಲಾ ಲೇಖಕಿಯರೂ, ಅವರವರ ಹಿನ್ನೆಲೆಯಲ್ಲೇ ಹೊಸ ಹೆಣ್ಣಿನ ಚಿತ್ರವನ್ನು ಹೇಗೆ ಅನಾವರಣ ಮಾಡುತ್ತಾರೆ ಅಂತ ನೋಡೋದು ಇದೆಯಲ್ಲ, ಅದೇ ಒಂದು ಸಮಗ್ರವಾದ ಹೊಸ ಹೆಣ್ಣನ್ನ ಕಟ್ಟಿಕೊಡುತ್ತೆ. ಇವರೆಲ್ಲರ ಅಂಶಗಳು ಸೇರಿದ ಒಂದು ಹೊಸ ಹೆಣ್ಣು ನನ್ನ ಮನಸ್ಸಿನಲ್ಲಿದ್ದಾಳೆ.

◆ **ನಿಮಗೆ ಒಂದು ಸಾಹಿತ್ಯ ಕೃತಿ ಯಾವ ಕಾರಣಕ್ಕಾಗಿ ಮುಖ್ಯ ಎನಿಸುತ್ತದೆ? ಶುದ್ಧ ಸಾಹಿತ್ಯಿಕ ಕಾರಣಗಳಿಗಾಗಿಯೇ ಅಥವಾ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಕಾರಣಗಳಿಗೆ ಮುಖ್ಯ ಎನಿಸುತ್ತದೆಯೇ?**

ಇದೊಂದು ಮಿಲಿಯನ್ ಡಾಲರ್ ಪ್ರಶ್ನೆ. ಯಾಕೆ ಅಂತಂದ್ರೆ, ಈ ದ್ವಂದ್ವ ತುಂಬಾ ಸರ್ತಿ ಹಲವು ಬಗೆಯ ಇಕ್ಕಟ್ಟುಗಳಲ್ಲಿ ನನ್ನನ್ನು ಸಿಕ್ಕಿ ಹಾಕಿಸಿದೆ. ನನಗೆ ಅದು ಒಂದು ಸಾಹಿತ್ಯ ಕೃತಿ ಆಗಿರ್ಬೇಕು ಅನ್ನೋದೇ ಸಾಹಿತ್ಯದ ವಿದ್ಯಾರ್ಥಿನಿಯಾಗಿ ನನ್ನ ಮೊದಲ ಆಯ್ಕೆ. ಹಂಗಾಗಿಲ್ದೆ ಇರೋದನ್ನು ಸಾಮಾಜಿಕ, ರಾಜಕೀಯ ಕಾರಣಗಳಿಗೆ ನಾನು ಚರ್ಚೆ ಮಾಡಲಿಕ್ಕೆ ಸಿದ್ಧವಾಗ್ತೀನಿ. ಅಂಥ ಕೃತಿಗಳಿಗೆ ಒಂದು ಪಾತ್ರ ಇರುತ್ತೆ ನಿಭಾಯಿಸಕ್ಕೆ ಅನ್ನೋದನ್ನ ನಾನು ಒಪ್ತೀನಿ. ರಾಜಕೀಯ ಪಾತ್ರ ಇರುತ್ತೆ, ಒಂದು ಸಾಂಸ್ಕೃತಿಕ ಪಾತ್ರ ಇರುತ್ತೆ. ಆದರೆ ಅದೇ ಕಾರಣಕ್ಕೆ ಅದನ್ನು ಒಂದು ಕಲಾ ಪಠ್ಯವಾಗಿಯೂ ನೀವು ಒಪ್ಪಿಕೊಳ್ಳಬೇಕು ಅಂತ ಹೇಳಿದ್ರೆ ನಾನು ಅದನ್ನ ಖಂಡಿತಾ ಒಪ್ಪಲಾರೆ.

◆ **ಸಮಕಾಲೀನ ಸಾಹಿತ್ಯ ಮತ್ತು ವಿಮರ್ಶೆಯ ಪಲ್ಲಟಗಳನ್ನು ನೀವು ಹೇಗೆ ನೋಡುತ್ತೀರಿ?**